**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂ:292/2019**

ಸಿ.ಡಬ್ಲ್ಯೂ –3 ಪಿ.ಡಬ್ಲ್ಯೂ -3

| | | |
|---|---|---|
| ಹೆಸರು | ಃ | ಪ್ರಕಾಶ |
| ತಂದೆಃಗಂಡ | ಃ | ಓಂ ಪ್ರಕಾಶ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕೆರೂರ ಗ್ರಾಮ |

ದಿನಾಂಕಃ16.01.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1, 2, 4 ರಿಂದ 13 ರವರ ಪರಿಚಯ ಇರುತ್ತದೆ. ನಾನು ಕೆಲಸಕ್ಕೆ ಹೋದಾಗ ಕೆಲಸ ಮಾಡುವಾಗ ಕರೆಂಟ ಹತ್ತಿರುತ್ತದೆ. ಪೋಲಿಸರು ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಮತ್ತೆನಾಗಿರುತ್ತದೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಈಗ ನಿಪಿ-1 ತೋರಿಸಿ ಸಹಿ ತೋರಿಸಿ ಅದನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಡ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.20.03.2019 ರಂದು ಬೆಳಗ್ಗೆ 11.30 ರಿಂದ 12.30 ರ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ನಾನು ಹಾಗೂ ಚಾಸಾ-2 ರವರು ಪಂಚನಾಮೆಗೆ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇವೆ ಎಂದರೆ ಸರಿ. ಘಟನಾ ಸ್ಥಳವನ್ನು ಚಾಸಾ-11 ರವರು ತೋರಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಎ.ಡಬ್ಲ್ಯೂ.ಎ. ವಕೀಲರಿಂದ**

ನನಗೆ ಸಹಿ ಮಾಡಲು ಕರೆದಿದ್ದರು ನಾನು ಸಹಿ ಮಾಡಿರುತ್ತೇನೆ.ಪಂಚನೆಮಯಲ್ಲಿ ಬರೆಯಲು ಮಾಹಿತಿ ನಾನು ಹೇಳಿರುವುದಿಲ್ಲ. ಬರೆದಿದ್ದ ಪಂಚನಾಮೆ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೋಲಿಸ ಠಾಣೆಗೆ ಕರೆಯಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಘಟನಾ ಸ್ಥಳದ ಪೂರ್ವದ ಕಡೆಗೆ ದ್ರಾಕ್ಷಿ ಬೆಳೆದಿರುತ್ತಾರೆ, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ತೊಗರಿ ಬೆಳೆದಿರುತ್ತಾರೆ. ನಾನು ಹೇಳಿದಂತೆ ಚಕುಬಂದಿ ಪಂಚನಾಮೆಯಲ್ಲಿ ಬರೆದಿರುತ್ತಾರೆ ಎಂದರೆ ಸಾಕ್ಷಿ ನಾನು ಕೇವಲ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಪೋಲಿಸರು ಬರೆದ ಸುಳ್ಳು ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಅವರು ಸಹಿ ಮಾಡು ಎಂದ ಕಾರಣ ನಾನು ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗದೇ ಸುಳ್ಳು ಪಂಚನಾಮೆ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.